# ಯೊಹಾನಿಯ ಗಾನಗಾರುಡಿ




'ಮನಿಕೆ ಮಗೆ ಹಿತೆ' ಎಂಬ ಶ್ರೀಲಂಕಾ ಭಾಷೆಯ, ಅರ್ಥವೇ ಆಗದ ಹಾಡೊಂದು (ಸಬ್‌ಟೈಟಲ್ ನೋಡಿ ಅದರ ಸಾರಾಂಶ ಅರಿಯಬೇಕಷ್ಟೆ) ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಸೃಷ್ಟಿಸಿದೆ. ನೋಡಲು ಪ್ರೌಢ ವಯಸ್ಸಿನವಳಂತೆ ಕಾಣುವ ಯೊಹಾನಿ ಡಿಸಿಲ್ವಾ ಕೆಲವೇ ದಿನಗಳಲ್ಲಿ ಎಷ್ಟೋ ಕೇಳುಗರ, ನೋಡುಗರ ಮನಗೆದ್ದದ್ದು ಈ ಹಾಡಿನಿಂದ.

ಚಿಕ್ಕಪ್ರಾಯದಲ್ಲಿ ಕೀಬೋರ್ಡ್ ಕಲಿತ ಯೊಹಾನಿ, ಹಾಡುಗಾರಿಕೆಯನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದವರಲ್ಲ. ಯೂಟ್ಯೂಬ್ ವಿಡಿಯೊಗಳನ್ನು ನೋಡಿ, ಸ್ನೇಹಿತರ ಸಲಹೆ ಪಡೆದು ಗಿಟಾರ್ ನುಡಿಸುವುದನ್ನು ಕಲಿತರು. ಲಾಜಿಸ್ಟಿಕ್ಸ್ ಮ್ಯಾನೇಜ್‌ಮೆಂಟ್ ಅನ್ನು ಆಸಕ್ತಿಯಿಂದ ಓದಿ, ಇಂಗ್ಲೆಂಡ್‌ನಿಂದ ಒಂದು ಪದವಿ ಪಡೆದುಕೊಂಡು ಬಂದ ಅವರು, ಅಕೌಂಟೆನ್ಸಿಯಲ್ಲಿ ಉನ್ನತ ಶಿಕ್ಷಣವನ್ನು ಆಸ್ಟ್ರೇಲಿಯಾದಿಂದ ಪಡೆದುಕೊಂಡರು. ಅಪ್ಪ ಸೇನೆಯಲ್ಲಿ ಕೆಲಸ ಮಾಡಿದವರು. ಅಮ್ಮ ಗಗನಸಖಿಯಾಗಿದ್ದರು. ಆರು ವರ್ಷಗಳ ಹಿಂದೆ ಯೂಟ್ಯೂಬರ್ ಆಗಿ ಸಂಗೀತದ ಇನಿಂಗ್ಸ್ ಆರಂಭಿಸಿದ ಯೊಹಾನಿ ಮೊದಲ ಎರಡು ವರ್ಷ ತಣ್ಣಗೆ ತಮ್ಮಿಷ್ಟದ ಹಾಡುಗಳ 'ಮ್ಯಾಷ್‌ಅಪ್' ಮಾಡಿಕೊಂಡಿದ್ದರು. ಅಷ್ಟು ಕಾಲದಲ್ಲಿ ಸುಮಾರು 29 ಸಾವಿರ ಪ್ರೇಕ್ಷಕರಷ್ಟೆ ಅವರ ಚಾನೆಲ್‌ನ ಸಂಗೀತವನ್ನು ನೋಡಿ–ಕೇಳಿದರು. ಆದರೆ, ಮೂರು ತಿಂಗಳ ಹಿಂದೆ ಬಿಡುಗಡೆಯಾದ 'ಮನಿಕೆ ಮಗೆ ಹಿತೆ' ಹಾಡನ್ನು ಸುಮಾರು 8 ಕೋಟಿ ಜನ ಯೂಟ್ಯೂಬ್‌ನಲ್ಲಿ ನೋಡಿದ್ದಾರೆ. ಬೇರೆ ಭಾಷೆಗಳಲ್ಲಿ ಅದರ ಅರ್ಥವನ್ನು ಹೋಲುವ ಸಾಹಿತ್ಯ ಬರೆದು, ಅದೇ ರಾಗದಲ್ಲಿ ಹಾಡಿ ಪುನರ್‌ಸೃಷ್ಟಿ ಮಾಡುವ ಪ್ರಕ್ರಿಯೆಯೂ ನಡೆದೇ ಇದೆ. ಅಮಿತಾಭ್ ಬಚ್ಚನ್ ತರಹದ ಅನುಭವಿ ನಟ ಕೂಡ 'ಪದೇ ಪದೇ ಈ ಹಾಡು ಕೇಳುವಂತಾಗಿದೆ' ಎಂದಿರುವುದು ಈ 28ರ ಯುವತಿಯಲ್ಲಿ ಸಹಜ ರೋಮಾಂಚನ ಮೂಡಿಸಿದೆ.

ಹಾಡಿನ ಕೊಂಡಿ:
https://bit.ly/38rDz0i




# ಅಮ್ಮನಿಗೆ ಟೈಗರ್ ಉಡುಗೊರೆ

'ಬೂಮ್' ಎನ್ನುವ ಹಿಂದಿ ಸಿನಿಮಾದ ಹೆಸರೇ ಎಷ್ಟೋ ಜನರಿಗೆ ಗೊತ್ತಿಲ್ಲ. ಆದರೆ, ಅದನ್ನು ನಟ ಜಾಕಿ ಶ್ರಾಫ್ ಕುಟುಂಬ ಮರೆತಿಲ್ಲ. ಅದರಲ್ಲೂ ಅವರ ಪತ್ನಿ ಅಯೇಶಾ ಶ್ರಾಫ್ ಅವರಿಗೆ ಚೆನ್ನಾಗಿ ನೆನಪಿದೆ. ಆ ಚಿತ್ರದ ಮೇಲೆ ಬಂಡವಾಳ ಹೂಡಿ ಅವರು ಕೈಸುಟ್ಟುಕೊಂಡಿದ್ದರು. ಸಾಲಗಾರರ ಫೋನ್ ಕರೆಗಳ ಕಾಟ ತಾಳಲಾರದೆ ಹೈರಾಣಾಗಿದ್ದರು. ಹಿಂದಿ ಚಿತ್ರದ ನಿರ್ಮಾಪಕಿಯಾಗಿಯೂ ಅಯೇಶಾ ಅವರನ್ನು ಆಗ ಕಾಡಿದ್ದು, ತಮ್ಮ ಹೆಸರಿನಲ್ಲೇ ಒಂದು ಐಷಾರಾಮಿ ಮನೆ ಇರಬೇಕು ಎನ್ನುವುದು. ಅದನ್ನು ಮಗ ಟೈಗರ್ ಶ್ರಾಫ್ ಇದೇ ವರ್ಷ ನನಸಾಗಿಸಿದ್ದಾರೆ.

ಟೈಗರ್ ಶ್ರಾಫ್‌ಗೆ ಚಿಕ್ಕಮಕ್ಕಳೇ ಹೆಚ್ಚು ಅಭಿಮಾನಿಗಳು. ಅವರ ಬಾಗುವ ಕಟ್ಟುಮಸ್ತು ದೇಹವನ್ನು ಕಂಡು ತಾವೂ ಅಂತೆಯೇ ಆಗಬೇಕೆಂದು ಬಯಸುತ್ತಿರುವ ಪ್ರೌಢ ವಯಸ್ಸಿನ ಮಕ್ಕಳ ಸಂಖ್ಯೆ ಹೆಚ್ಚೇ ಇದೆ. ಅದಕ್ಕೇ 2014ರಿಂದ ಇಲ್ಲಿಯವರೆಗೆ ಟೈಗರ್ ಶ್ರಾಫ್ ಪುರುಸೊತ್ತೇ ಇಲ್ಲದಂತೆ ಕೆಲಸ ಮಾಡಲು ಸಾಧ್ಯವಾಗುತ್ತಿರುವುದು.

2014ರಲ್ಲಿ 'ಹೀರೊಪಂತಿ' ಸಿನಿಮಾ ಮೂಲಕ ಚಿತ್ರಪ್ರವೇಶ ಮಾಡಿದ ಟೈಗರ್ ಆಮೇಲೆ 'ಭಾಗಿ 2' ಚಿತ್ರದಿಂದಲೂ ಜನಮನ ಗೆದ್ದರು. 'ವಾರ್'ನಲ್ಲಿ ಹೃತಿಕ್ ರೋಷನ್ ಜತೆಗೂಡಿ ಅಭಿಮಾನಿಗಳನ್ನು ರಂಜಿಸಿದರು. ಈಗ 'ಗಣಪತ್' ಎಂಬ ಹೊಸ ಚಿತ್ರಕ್ಕೆ ಸಹಿ ಹಾಕಿದ್ದಾರೆ. 'ಹೀರೊಪಂತಿ'ಯ ಎರಡನೇ ಕಂತಿನ ಚಿತ್ರವೂ ತಯಾರಾಗುತ್ತಿದೆ. ಹೀಗೆ ಶಿಸ್ತಿನಿಂದ ಕೆಲಸ ಮಾಡುತ್ತಾ ಬಂದ ಅವರು ಮೊದಲು ಮಾಡಿದ ಕೆಲಸವೆಂದರೆ, ಮುಂಬೈನ ಖಾರ್‌ನಲ್ಲಿ ಎಂಟು ಬೆಡ್‌ರೂಂಗಳಿರುವ ಐಷಾರಾಮಿ ಮನೆಯನ್ನು ಅಮ್ಮನ ಹೆಸರಿನಲ್ಲಿ ಖರೀದಿಸಿದ್ದು. ಜಾನ್ ಅಬ್ರಹಾಂ ಸಹೋದರ ಅಲಾನ್ ಈ ಮನೆಯ ವ್ಯವಹಾರವನ್ನು ಕುದುರಿಸಿಕೊಟ್ಟರು. 'ತೆರೆಯಿಂದಾಚೆಗೆ ನನ್ನ ಬದುಕಿನಲ್ಲಿ ಮಾಡಿದ ಮಹಾನ್ ಕೆಲಸವೆಂದರೆ ಈ ಮನೆಯನ್ನು ಖರೀದಿಸಿದ್ದು' ಎಂದು ಟೈಗರ್ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ.

■ ವಿಶಾಖ ಎನ್.